OS No.170/2023

PW-01

**ದಿನಾಂಕಃ 08-12-2025.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ ಶ್ರೀ SVK ಮಾನ್ಯ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ದಿಃ31-07-2023 ರಂದು ಆಗಿರುವ ಭೂಮಿಯ ಖಂಡಿತ ಖರೀದಿ ಪತ್ರವನ್ನು ನಿಪಿ.1 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಎ) ಎಂದು ಗುರುತಿಸಲಾಯಿತು, ಸಾಕ್ಷಿಯು ನಿಪಿ.1 ರ ಮೇಲಿರುವ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.1 ರ ಮೇಲಿರುವ ಸಮ್ಮತಿ ಸಾಕ್ಷಿಗಳಾದ ಶ್ರೀ ಅಮರೇಶ ತಂದೆ ರಾಜಶೇಖರ ದೇಸಾಯಿ ಹಾಗೂ ಶ್ರೀ ಹನಮಂತ ತಂದೆ ರಾಮಚಂದ್ರ ಗುಡಗುಂಟಿ ಹಾಗೂ ಪತ್ರ ಬರಹಾಗಾರರದಾ ಶ್ರೀ ಶರಣಪ್ಪ ಬುಸ್ಸಿಗಾರ ಇವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1(ಸಿ) ಯಿಂದ (ಈ) ಎಂದು ಗುರುತಿಸಲಾಯಿತು. ಸನ್ 2023-24 ನೇ ಸಾಲಿನ ಸ.ನ.2/1 ಎ ದ RTC ನ್ನು ನಿಪಿ.2, ಸ.ನಂ.287 ರ settlement ಆಕಾರ ಬಂದ ದೃಡೀಕೃತ ನಕಲನ್ನು ನಿಪಿ.3, Transaction receipt ನ್ನು ನಿಪಿ.4, ಸ.ನಂ.287 ರ documentary summary ನ್ನು ನಿಪಿ.5, ಒಂದು ಭೂಮಿ ಖಂಡಿತ ಖರೀದಿ ಪತ್ರವನ್ನು ನಿಪಿ.6, ಅನುಭಂದ-II ನ್ನು ನಿಪಿ.7, ನಮೂನೆ -15 ನ್ನು ನಿಪಿ.8, ಸನ್ 2023-24 ನೇ ಸಾಲಿನ ಸ.ನಂ.287/3 ರ RTC ಯನ್ನು ನಿಪಿ.9, ದಿಃ 06-07-2023 ರಂದು ಪ್ರತಿವಾದಿಗೆ ಕಳುಹಿಸಿರುವ ತಿಳುವಳಿಕೆ ಪತ್ರದ ಕಚೇರಿಯ ನಕಲನ್ನು ನಿಪಿ.10, ಒಂದು RPAD ಲಕೋಟೆಯನ್ನು ನಿಪಿ.11, postal receipt ನ್ನ ನಿಪಿ.12 ಎಂದು ಗುರುತಿಸಲಾದವು. ನನ್ನ ದಾವೆಯನ್ನು ನಾನು ಕೇಳಿರುವಂತೆ ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ 1 ನೇ ಪ್ರತಿವಾದಿ ಏಕಪಕ್ಷೀಯರಾಗಿರುವುದರಿಂದ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು.ಪ್ರ.ದ.ನ್ಯಾ.ದಂ. ಶಹಾಪೂರ.